# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1275 (1317) |
| ಸದಸ್ಯರ ಹೆಸರು | : | ಶ್ರೀ ಭೀಮರಾವ್ ಬಸವರಾಜ ಪಾಟೀಲ |
| ಉತ್ತರಿಸುವ ದಿನಾಂಕ | : | 22.08.2025 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆ ಹುಮನಾಬಾದ ತಾಲ್ಲೂಕಿನ ಬೋರಂಪಳ್ಳಿ ಗ್ರಾಮದಲ್ಲಿ ಬಂಜಾರ ಸಮುದಾಯಕ್ಕೆ ಅನುಕೂಲವಾಗುವ ದೃಷ್ಟಿಯಿಂದ ಬಂಜಾರ ಸಮುದಾಯ ಟ್ರೈಬಲ್ ಪಾರ್ಕ್ ಕಾಮಗಾರಿ ಕಳೆದ 8 ವರ್ಷಗಳಿಂದ ನಿಧಾನಗತಿಯಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | 2015-16ಸಾಲಿನ ಆಯವ್ಯಯ ಭಾಷಣದಲ್ಲಿ ಬೀದರ್ ಜಿಲ್ಲೆ ಹುಮನಾಬಾದ್ ತಾಲ್ಲೂಕಿನ ಬೋರಂಪಳ್ಳಿಯಲ್ಲಿ ಬಂಜಾರರ ಆರ್ಥಿಕ ಮತ್ತು ಸಾಂಸ್ಕೃತಿಕ ಉತ್ತೇಜನ ಕೇಂದ್ರ ಸ್ಥಾಪನೆ ಮಾಡಲು ಯೋಜನೆಗೆ ರೂ. 600.00 ಲಕ್ಷಗಳನ್ನು ನಿಗಧಿಪಡಿಸಲಾಗಿದೆ.. ಅದರಂತೆ ಯೋಜನಾ ಕಛೇರಿ/ಗೆಸ್ಟ್ ಹೌಸ್ ನಿರ್ಮಾಣ ಕಾಮಗಾರಿಗೆ ಮೊದಲನೇ ಹಂತದಲ್ಲಿ ರೂ. 143.00 ಲಕ್ಷಗಳನ್ನು ಹಾಗೂ ಎರಡನೇ ಹಂತದಲ್ಲಿ ರೂ. 170.00 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ಕಾಮಗಾರಿ ಪೂರ್ಣಗೊಂಡಿರುತ್ತದೆ. |
| ಆ) | ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು; | ಸದರಿ ಪಾರ್ಕ್ ಸುತ್ತ ತಂತಿ ಬೇಲಿ ಅಳವಡಿಸಲು ರೂ.30.00 ಲಕ್ಷ, ಕಾಂಪೌಂಡ್ ಗೋಡೆ ಹಾಗೂ ವಾಚ್ ಟವರ್ ನಿರ್ಮಾಣಕ್ಕಾಗಿ ರೂ.130.00 ಲಕ್ಷ, ಒಳ ರಸ್ತೆಗಳು ನಿರ್ಮಾಣಕ್ಕಾಗಿ ರೂ.110.00 ಲಕ್ಷ, ಲಂಬಾಣಿ ಸಾಂಪ್ರದಾಯ ಕಲೆ ಮತ್ತು ಸಾಂಸ್ಕೃತಿಕ ಪ್ರಚಾರದ ಕಟ್ಟಡ ನಿರ್ಮಾಣಕ್ಕಾಗಿ ರೂ.40.00 ಲಕ್ಷ, ಲಂಬಾಣಿ ಸಾಂಪ್ರದಾಯ ಕಲೆ ಮತ್ತು ಸಾಂಸ್ಕೃತಿಕ ಪ್ರಚಾರದ ಹಾಸ್ಟೆಲ್ ನಿರ್ಮಾಣಕ್ಕಾಗಿ ರೂ.174.00 ಲಕ್ಷಗಳು ಸೇರಿ ಒಟ್ಟಾರೆ ರೂ.797.00 ಲಕ್ಷಗಳ ಅನುದಾನವನ್ನು ಬಂಜಾರ ಆರ್ಥಿಕ ಮತ್ತು ಸಾಂಸ್ಕೃತಿಕ ಉತ್ತೇಜನ ಕೇಂದ್ರ ನಿರ್ಮಾಣ ಯೋಜನೆಗೆ ವೆಚ್ಚ ಮಾಡಲಾಗಿದೆ.<br>1. ಯೋಜನಾ ಕಛೇರಿ/ಗೆಸ್ಟ್ ಹೌಸ್ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದೆ.<br>2. ಟ್ರೈಬಲ್ ಪಾರ್ಕ್ ಸುತ್ತ ತಂತಿ ಬೇಲಿ ಅಳವಡಿಸುವಿಕೆ ಕಾಮಗಾರಿ ಪೂರ್ಣಗೊಂಡಿದೆ.<br>3. ಲಂಬಾಣಿ ಸಾಂಪ್ರದಾಯ ಕಲೆ ಮತ್ತು ಸಾಂಸ್ಕೃತಿಕ ತರಬೇತಿ ಕಟ್ಟಡ ಕಾಮಗಾರಿ ಪೂರ್ಣಗೊಂಡಿದೆ.<br>4. ಟ್ರೈಬಲ್ ಪಾರ್ಕ್ ಸುತ್ತ ಕಾಂಪೌಂಡ್ ಗೋಡೆ ಹಾಗೂ ಒಳರಸ್ತೆಗಳ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದೆ. |

| | | |
|---|---|---|
| ಇ) | ಟ್ರೈಬಲ್ ಪಾರ್ಕ್ ಕಾಮಗಾರಿ ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು? (ಮಾಹಿತಿ ನೀಡುವುದು) | ಹುಮನಾಬಾದ್ ತಾಲ್ಲೂಕಿನ ಬೋರಂಪಳ್ಳಿ ಗ್ರಾಮದ ಲಾಲ್ ದರಿಯಲ್ಲಿರುವ ಟ್ರೈಬಲ್ ಪಾರ್ಕ್‌ನಲ್ಲಿ ಬಹುತೇಕ ಕಾಮಗಾರಿಗಳು ಪೂರ್ಣಗೊಂಡಿವೆ. |

**SWD/279/SDC/2025**

**(ಡಾ: ಹೆಚ್.ಸಿ ಮಹದೇವಪ್ಪ)**

ಸಮಾಜ ಕಲ್ಯಾಣ ಸಚಿವರು.